ತುಸ್ತೀದಾರರ ಮನೆಯಲ್ಲಯೇ ಒಟ್ಟಿಗೆ ವಾಸಿಸುತ್ತಿದ್ದಾರೆಂದು ತಿಳಿದುಬಂದಿದೆ. ಅಲ್ಲದೆ, ಅವರಿಗೆ ಕುರ್ಲಿ ಗ್ರಾಮದಲ್ಲಿ ಮತ್ತೊಂದು ಮನೆಯಿದ್ದು ಅದು ಹಾಳಿ ಪಾಳಿಯಿದೆ ಎಂದು ತಿಳಿದುಬಂದಿದೆ. ಈ ಜಪ್ತಿ ಕಾರ್ಯವು ದಿನಾಂಕ ೨೮-೩-೧೯೯೦ರ ಸಂಜೆ ೪-೩೦ರಿಂದ ೫-೦೦ ಗಂಟೆಯೊಳಗೆ ನಡೆದಿದ್ದು, ಜಪ್ತಿ ಮಾಡಲಾದ ಹತ್ತು ಕ್ವಿಂಟಾಲ್ ಭತ್ತವನ್ನು ತಾಲ್ಲೂಕು ವ್ಯವಸಾಯ ಸೇವಾ ಸಹಕಾರ ಸಂಘದಲ್ಲಿ ಶೇಖರಿಸಲಾಗಿದೆ.

೪ ಶಿಂಷಾ ನಾಲೆಗೆ ನೀರೊದಗಿಸುವ ಬಗ್ಗೆ

ಶ್ರೀ ಎಂ. ಎಸ್ ಆತ್ಮಾನಂದ (ಮಂಡ್ಯ).— ಮಾನ್ಯ ಅಧ್ಯಕ್ಷರೆ, ಕೆ.ಆರ್.ಎಸ್. ಅಡಿಯಲ್ಲಿನ ವಿ.ಸಿ. ನಾಲೆಯು ಅಡಿ ನೀರಿನ ವಿತರಣಾ ನಾಲೆಯು ವ್ಯಾಪ್ತಿಯಲ್ಲಿ ಶಿಂಷಾ ನಾಲೆಯು ಒಂದಾಗಿದೆ. ಈ ನಾಲೆಯ ಪರಿಸ್ಥಿತಿಯಲ್ಲಿ ಅನೇಕ ಗ್ರಾಮಗಳು ಬರುತ್ತವೆ. ಈ ನಾಲೆ ಟೇಲ್ ಎಂಡ್ ನಾಲೆ. ಈ ಗ್ರಾಮದ ರೈತರಿಗೆಗಳಿಗೆ ಮತ್ತು ಜಾನುವಾರುಗಳಿಗೆ ಕುಡಿಯುವ ನೀರಿನ ತೀವ್ರ ಅಭಾವ ತಲೆದೋರಿದೆ ಈ ನೀರಿನ ಕೊರತೆ ನಿವಾರಿಸುವುದಕ್ಕೆ ಬೇರೆ ಮಾರ್ಗವು ಇರುವುದಿಲ್ಲ. ಈ ನಾಲೆಗೆ ವಿ.ಸಿ. ನಾಲೆಯಿಂದ ಒಂದು ಸಾವಿರ ಕ್ಯೂಸೆಕ್ಸ್ ನೀರನ್ನು ಬಿಡಬೇಕಾದುದು ಅತೀ ಅವಶ್ಯವಾಗಿದೆ. ಈ ರೀತಿ ಬಿಡುಗಡೆ ಆದರೆ ಸಮಸ್ಯೆ ಪರಿಹಾರ ಆಗುತ್ತದೆ. ಆದುದರಿಂದ ಸನ್ಮಾನ್ಯ ಸಚಿವರನ್ನು ಶಿಂಷಾ ನಾಲೆಗೆ ನೀರು ಬಿಡುಗಡೆ ಮಾಡಲು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಖಾತೆ ಸಚಿವರು).— ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳು ಮತ್ತು ಲೋಕೋಪಯೋಗಿ ಸಚಿವರುಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

ಶಿಂಷಾ ನಾಲೆಯಿಂದ ಕೆಳಗಡೆ ಬರುವ ಆಯ್ಕೆಕಟ್ಟಿಗೆ ಬೇಸಗೆಯಲ್ಲಿ ನೀರು ಬಿಡುವ ಕಾರ್ಯಕ್ರಮವು ಕರ್ನಾಟಕ ನೀರಾವರಿ ಕಾಯಿದೆ, ೧೯೬೫ರಂತೆ ಹೊರಡಿಸಿರುವ ಪ್ರಕಟಣೆಯಲ್ಲಿ ಸೇರಿರುವುದಿಲ್ಲ. ವಿಶ್ವೇಶ್ವರಯ್ಯ ನಾಲೆಯ ಜಿನುಗು ನೀರು ಶಿಂಷಾ ನಾಲೆಗೆ ಹರಿದು ಬರುತ್ತಿದ್ದರೆ, ಅದನ್ನು ರೈತರು ಉಪಯೋಗಿಸಿಕೊಳ್ಳುತ್ತಿರಬಹುದು. ಆದರೂ ಸಹಾ, ಈ ಪ್ರದೇಶದಲ್ಲಿ ಕುಡಿಯುವ ನೀರಿನ ಸಮಸ್ಯೆ ಇದೆಯೆಂದು ಮಾನ್ಯ ಶಾಸಕರು ಸೂಚಿಸಿರುವುದರಿಂದ, ಕುಡಿಯುವ ನೀರಿಗಾಗಿ ವಿಶ್ವೇಶ್ವರಯ್ಯ ನಾಲೆಯಿಂದ ಶಿಂಷಾ ನಾಲೆಗೆ ನೀರು ಬಿಡುವ ಬಗ್ಗೆ ಪರಿಶೀಲಿಸಲಾಗುವುದು.

೫ ದ.ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕಿನಲ್ಲಿರುವ ನರಹರಿ ಬೆಟ್ಟವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಕುರಿತು

ಶ್ರೀ ರುಕ್ಮಯ್ಯ ಪೂಜಾರಿ (ಬಿಟ್ಟಾ).— ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲ್ಲೂಕಿನ ಪಂಂಗಳೂರು ಬೆಂಗಳೂರು ರಾಷ್ಟ್ರೀಯ ಹೆದ್ದಾರಿಯ ಪಕ್ಕ ಬೋಳಂಗಡಿ ಎಂಬಲ್ಲಿ ಒಂದು ಎತ್ತರವಾದ ನರಹರಿ ಪರ್ವತವಿದೆ. ಈ ಬೆಟ್ಟದ ಮೇಲೆ ಬಹಳ ಪುರಾತನವಾದ ನರಹರಿ ದೇವಸ್ಥಾನವಿದೆ. ಈಗ ಅದರ ಜೀರ್ಣೋದ್ಧಾರ ಕೆಲಸ ನಡೆಯುತ್ತಾ ಇದೆ. ಮಹಾ ಭಾರತ ಕಾಲದಲ್ಲಿ ಪಾಂಡವರು ಆ ಬೆಟ್ಟಕ್ಕೆ ಭೇಟಿ ಕೊಟ್ಟಿದ್ದಾರೆ ಎಂಬುದಾಗಿ ಪ್ರತೀತಿ ಇದೆ. ಅದಕ್ಕೆ ಸರಿಯಾಗಿ ಕಪ್ಪು ಕಲ್ಲಿನ ಮೇಲೆ ಹೆಸರಿಗೆ ತಕ್ಕಂತೆ ಶಂಕ ಚಕ್ರ ಗದಾ ಪದ್ಮ ಎಂಬ ನಾಲ್ಕು ಕೆರೆಗಳಿವೆ. ಅಲ್ಲಿ ಸೋಣ ಅಮಾವಾಸ್ಯೆ ಆಟಿ ಅಮಾವಾಸ್ಯೆ ಸಮಯದಲ್ಲಿ ಭಕ್ತರು ತೀರ್ಥ ಸ್ನಾನ ಮಾಡಿ ದೇವರ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ಹಾಗೆಯೇ ಸಾಮಾನ್ಯವಾಗಿ ಡಿಸೆಂಬರ್ ತಿಂಗಳಲ್ಲಿ ಅಲ್ಲಿ ಲಕ್ಷ ದೀಪೋತ್ಸವ ಸಹ ನಡೆಯುತ್ತದೆ. ಬೆಟ್ಟದ ಮೇಲೆ ನಿಂತು ಸುತ್ತ ನೋಡಿದಾಗ ಅತ್ಯಂತ ಸುಂದರವಾದ ದೃಶ್ಯ ನಮಗೆ ಕಾಣುತ್ತದೆ. ಮತ್ತು ಅದು ರಾಷ್ಟ್ರೀಯ ಹೆದ್ದಾರಿಯ ಪಕ್ಕ ಇರುವುದರಿಂದ ಜನರಿಗೆ ಹೋಗಿ ಬರಲು ಕೂಡ ತುಂಬಾ ಅನುಕೂಲವಾಗುತ್ತದೆ. ಇವೆಲ್ಲಾ ದೃಷ್ಟಿಯಿಂದ ಈ ನರಹರಿ ಬೆಟ್ಟವನ್ನು ಒಂದು ಸುಂದರವಾದ ಪ್ರವಾಸಿ ಕೇಂದ್ರವನ್ನಾಗಿ ಮಾಡುವುದು ಅತೀ ಸೂಕ್ತ ಎಂಬುದಾಗಿ ಮಾನ್ಯ ಪ್ರವಾಸೋದ್ಯಮ ಸಚಿವರ ಗಮನಕ್ಕೆ ತರಲು ಇಚ್ಛಿಸುತ್ತೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ (ಪ್ರವಾಸೋದ್ಯಮ ಸಚಿವರು).— ಮಾನ್ಯ ಅಧ್ಯಕ್ಷರೆ, ಮಾನ್ಯ ಶಾಸಕರು ಬಂಟ್ವಾಳ ತಾಲ್ಲೂಕಿನ ಬೆಟ್ಟದ ಬಗ್ಗೆ ಏನು ಹೇಳಿದ್ದಾರೆ ಅದನ್ನು ನಾನು ಒಪ್ಪುತ್ತೇನೆ. ಅದು ಅತ್ಯುತ್ತಮವಾದ ಪ್ರವಾಸಿ ಕೇಂದ್ರವಾಗುವುದಕ್ಕೆ ಸಾಧ್ಯವಿದೆ. ಈಗಾಗಲೇ ಪ್ರವಾಸೋದ್ಯಮ